( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

**ಅಸಲು ದಾವೆ ನಂ.168/2020**

**ದಿನಾಂಕಃ 16-04-2024, ಪಿ ಡಬ್ಲ್ಯೂ–2**

**ಪಾಟೀ ಸವಾಲು ಃ ಶ್ರೀ ಹೆಚ್ ಆರ್ ಎನ್ ವಕೀಲರಿಂದಃ**

ವಾದಿ ನನ್ನ ಹೆಂಡತಿಯ ತಮ್ಮ. ನನ್ನ ಊರು ರಂಗಾಪುರ. ವಾದಿಯ ಊರು ಪಿ ಚಾಕನಹಳ್ಳಿ ಗ್ರಾಮ, ನಮ್ಮ ಊರಿನಿಂದ ಪಿ ಚಾಕನಹಳ್ಳಿ ಗ್ರಾಮಕ್ಕೆ ಒಂದು ಕಿ ಮೀ ಅಂತರ ಇದೆ. ನಾನು ಮೂಲತಃ ಕೃಷ್ಣಾಪುರ ಗ್ರಾಮದವರು. ನಾನು ರಂಗಾಪುರ ಗ್ರಾಮಕ್ಕೆ ಇತ್ತೀಚೆಗೆ ಬಂದು ನೆಲೆಸಿದ್ದೇನೆ ಎಂದರೆ ಸಾಕ್ಷಿಯು 40 ವರ್ಷಗಳ ಹಿಂದೆ ಬಂದು ನೆಲೆಸಿರುತ್ತೇನೆ ಎಂದು ನುಡಿಯುತ್ತಾರೆ. ವಾದಿ ನನ್ನ ಬಾಮೈದ ಆದ್ದರಿಂದ ಈ ದಾವೆಯಲ್ಲಿ ಸಾಕ್ಷಿ ನುಡಿಯಲು ಬಂದಿದ್ದೇನೆ ಎಂದರೆ ಸರಿ.

ವಾದಿಯು ನಾನು ದಾವೆಯನ್ನು ಹೂಡಿದ್ದೇನೆ, ಅದರಲ್ಲಿ ಸಾಕ್ಷಿ ನುಡಿಯುವಂತೆ ನನ್ನನ್ನು ಕರೆದುಕೊಂಡು ಬಂದಿದ್ದಾರೆ ಎಂದರೆ ಸರಿ. ವಾದಿಯು ಈ ದಾವೆಯನ್ನು ಮನೆಯ ವಿಚಾರಕ್ಕೆ ಹೂಡಿದ್ದಾರೆ. ವಾದಿಯು ಈ ದಾವೆಯನ್ನು ಯಾವ ಕಾರಣಕ್ಕೆ ಹೂಡಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿನ ವಿಚಾರಗಳನ್ನು ನಾನು ವಕೀಲರಿಗೆ ಹೇಳಿದ್ದರಿಂದ ಅವರು ಬರೆದಿರುತ್ತಾರೆ.

ದಾವಾ ಆಸ್ತಿಯ ಖಾತಾ ನಂಬರ್ 4, ಅದರ ವಿಸ್ತೀರ್ಣ ಪೂರ್ವ ಪಶ್ಚಿಮ 60 ಅಡಿಗಳು, ಉತ್ತರ ದಕ್ಷಿಣ 40 ಅಡಿಗಳು ಇದೆ. ದಾವಾ ಆಸ್ತಿಯ ಚೆಕ್ಕು ಬಂದಿ ನನಗೆ ಗೊತ್ತು . ದಾವಾ ಆಸ್ತಿ ಸರ್ವೆ ನಂಬರ್ ಜಮೀನಿನಲ್ಲಿದೆ. ಸದರಿ ಜಮೀನಿನ ಸರ್ವೆ ನಂಬರ್ 24/7. ಸರ್ವೆ ನಂಬರ್ 24/7 ರಲ್ಲಿ ಎರಡು ಮನೆಗಳು ಅಕ್ಕಪಕ್ಕ ಇವೆ. ಸದರಿ ಮನೆಗಳು ಮಂಗಳೂರು ಹೆಂಚಿನ ಮನೆಗಳು ಎಂದರೆ ಸರಿ. ಸರ್ವೆ ನಂ.24/7 ರ ಜಮೀನು ಮೂಲತಃ ಪ್ರತಿವಾದಿಯ ತಂ ದೆಗೆ ಸೇರಿದ ಆಸ್ತಿ ಎಂದರೆ ಇರಬಹುದು, ಸಾಕ್ಷಿಯು

ಮುಂದುವರೆದು ವಾದಿಮತ್ತುಪ್ರತಿವಾದಿ ದಾಯಾದಿಗಳು ಆಗಿರುವುದರಿಂದಇರಬಹುದು ಎಂದು ನುಡಿಯುತ್ತಾರೆ.

ಸರ್ವೆ ನಂ.24/7 ರ ಜಮೀನಿನನ್ನು ಪ್ರತಿವಾದಿಯ ತಂದೆ ಕ್ರಯಕ್ಕೆ ಖರೀದಿಸಿದ ಆಸ್ತಿ ಎಂದರೆ ಇರಬಹುದು. ಪ್ರತಿವಾದಿಯ ತಂದೆ ಖರೀದಿಸುವಾಗ ಸರ್ವೆ ನಂಬರ್ 24 ಆಗಿತ್ತು ನಂತರ ದುರಸ್ತು ಆಗಿ ಸರ್ವೆ ನಂಬರ್ 24/7 ಎಂದು ಪೋಡಾಗಿದೆ ಎಂದರೆ ಸರಿ. ಸರ್ವೆ ನಂ.24/7 ರಲ್ಲಿ 1 ಎಕರೆ 12 ಗುಂಟೆ ಜಮೀನು ಎಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿ ವಾಸ ಮಾಡುತ್ತಿರುವ ಮನೆಯ ಪೂರ್ವ ದಿಕ್ಕಿಗೆ ಇರುವ ಮನೆಗೆ ವಾದಿ ಈ ದಾವೆ ಹೂಡಿದ್ದಾರೆ ಎಂದರೆ ಸರಿ. ಸರ್ವೆ ನಂ. 24/7 ರ ಜಮೀನು ಗ್ರಾಮ ಠಾಣಕ್ಕೆ ಹೊಂದಿಕೊಂಡಂತೆ ಇದೆ ಎಂದರೆ ಸರಿ. ವಾದಿಗೆ ಗ್ರಾಮ ಠಾಣಾದಲ್ಲಿ ಯಾವುದೇ ಮನೆ ಇಲ್ಲ. ವಾದಿಯು ಈಗ ಹೊಸ ಆರ್ ಸಿ ಸಿ ಮನೆಯನ್ನು ಸರ್ವೆ ನಂಬರ್ ಜಮೀನಿನಲ್ಲಿ ನಿರ್ಮಾಣ ಮಾಡಿದ್ದಾರೆ , ಸದರಿ ಮನೆಯನ್ನು ಒಂದು ವರ್ಷಗಳ ಹಿಂದೆ ಕಟ್ಟಿದ್ದಾರೆ. ವಾದಿ ಈಗ ಹೂಸದಾಗಿ ಕಟ್ಟಿರುವ ಮನೆಯ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಸದರಿ ಮನೆಯ ವಿಸ್ತೀರ್ಣ ಪೂರ್ವ ಪಶ್ಚಿಮ 30 ಅಡಿಗಳು, ದಕ್ಷಿಣೋತ್ತರ 20 ಅಡಿಗಳು ಇದೆ.

ಹೊಸ ಮನೆಗೆ ಹಿತ್ತಲು ಇಲ್ಲ, ಹೊಸ ಮನೆಯ ಪೂರ್ವಕ್ಕೆ ಪ್ರಕಾಶ ರವರ ಜಮೀನು, ಪಶ್ಚಿಮಕ್ಕೆ ವಾದಿಯ ಉಳಿಕೆ ಬಾಬ್ತು ಜಮೀನು, ಉತ್ತರಕ್ಕೆ ರಾಜೇಗೌಡರ ಜಮೀನು, ದಕ್ಷಿಣಕ್ಕೆ ದ್ಯಾವೇಗೌಡರ ಜಮೀನು ಇದೆ. ವಾದಿಯು ನಿರ್ಮಿಸಿರುವ ಹೊಸ ಮನೆಯ ಪಕ್ಕ ಉಳಿಕೆ ಜಮೀನು ಇದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ನಿರ್ಮಿಸಿರುವ ಮನೆಯ ಜಾಗವು ಗ್ರಾಮ ಠಾಣಕ್ಕೆ ಸೇರಿದ್ದು ಅದು ಖಾತಾ ನಂ.4 ಆಗಿದ್ದು , ಹಳೆ ಮನೆಯ ಜಾಗದಲ್ಲಿ ಹೊಸ ಮನೆ ಕಟ್ಟಿದ್ದಾರೆ ಎಂದರೆ ಸರಿಯಲ್ಲ .

ದಾವಾ ಆಸ್ತಿ ಪ್ರತಿವಾದಿಯ ತಂದೆಗೆ ಸೇರಿದ ಆಸ್ತಿ ಎಂದರೆ ಸರಿಯಲ್ಲ. ಸರ್ವೆ ನಂ.24/7 ರಲ್ಲಿರುವ ಎರಡು ಮನೆಗಳ ಪೈಕಿ ಒಂದು ಮನೆಯಲ್ಲಿ ಪ್ರತಿವಾದಿ ವಾಸ ಮಾಡುತ್ತಿದ್ದು, ಇನ್ನೊಂದು ಮನೆಯಲ್ಲಿ ದನ ಕರುಗಳನ್ನು ಕಟ್ಟಿ ಹಾಕುತ್ತಿದ್ದರು ಎಂದರೆ ಸರಿಯಲ್ಲ. ದನಕರುಗಳನ್ನು ಕಟ್ಟಿ ಹಾಕುತ್ತಿದ್ದ ಮನೆಯಲ್ಲಿ ವಾದಿ ಅಕ್ರಮವಾಗಿ ಸೇರಿಕೊಂಡಿದ್ದಾರೆ ಎಂದರೆ ಸರಿಯಲ್ಲ ಸದರಿ ಮನೆಯನ್ನು ಬಿಟ್ಟುಕೊಡುವಂತೆ ಪಂಚಾಯತಿ ನಡೆಯಿತು ಎಂದರೆ ಸಾಕ್ಷಿಯು ಆ ವಿಚಾರವಾಗಿ ಪಂಚಾಯತಿ ನಡೆದಿಲ್ಲ , ಆದರೆ ಸಮಸ್ಯೆ

ಬಗೆಹರಿಸಿಕೊಳ್ಳವಂತೆ ಪಂಚಾಯತಿ ನಡೆಯಿತು ಎಂದು ನುಡಿಯುತ್ತಾರೆ. ನಾವು ಪಂಚಾಯತಿಯವರ ತೀರ್ಮಾನಕ್ಕೆ ಒಪ್ಪಿ ಕೊಳ್ಳದೇ ಈ ದಾವೆಯನ್ನು ವಾದಿ ಹೂಡಿದ್ದಾರೆ ಎಂದರೆ ಸರಿಯಲ್ಲ . ದಾವಾ ಆಸ್ತಿಯಲ್ಲಿ ವಾದಿಗೆ ಯಾವುದೇ ಹಕ್ಕು ಸಂಬಂಧ ಇಲ್ಲ ಎಂದರೆ ಸರಿಯಲ್ಲ . ವಾದಿಯು ಹೊಸ ಮನೆಯನ್ನು ನಿರ್ಮಿಸಿದ ನಂತರ ದಾವಾ ಆಸ್ತಿಯಲ್ಲಿ ವಾಸ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಯು ದನಕರುಗಳನ್ನು ಕಟ್ಟಿ ಹಾಕುತ್ತಾ ಮತ್ತು ಸಾಮಾನುಗಳನ್ನು ಇಟ್ಟು ಕೊಂಡಿದ್ದಾರೆ.

ಪ್ರತಿವಾದಿಯ ತಂದೆ ಮತ್ತು ವಾದಿಯ ತಂದೆ ಖಾಸಾ ಅಣ್ಣ ತಮ್ಮಂದಿರಾ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ವಾದಿಯ ತಾತ ಮತ್ತು ಪ್ರತಿವಾದಿಯ ತಂದೆ ಖಾಸಾ ಅಣ್ಣ ತಮ್ಮಂದಿರು ಎಂದು ನುಡಿಯುತ್ತಾರೆ. ವಾದಿಯ ತಾತ ಮತ್ತು ಪ್ರತಿವಾದಿಯ ತಂದೆ ಅಣ್ಣ ತಮ್ಮಂದಿರು ಎಂಬ ಬಗ್ಗೆ ದಾಖಲೆ ವಾದಿಯ ಬಳಿ ಇರುತ್ತದೆ .

ದಾವಾ ಆಸ್ತಿ ವಿಭಾಗದ ಮುಖಾಂತರ ಬಂದಿರುವ ಬಗ್ಗೆ ದಾಖಲೆಗಳು ಇರಬಹುದು, ನಾನು ಆ ದಾಖಲೆಯನ್ನು ನೋಡಿಲ್ಲ. ದಾವಾ ಆಸ್ತಿ ಯನ್ನು ವಾದಿ ಕಟ್ಟಿಲ್ಲ ಮತ್ತು ಅವರಿಗೆ ಸೇರಬೇಕಾಗಿಲ್ಲ ಎಂದರೆ ಸರಿಯಲ್ಲ . ಊರಿನ ಒಳಗೆ ಇರುವ ಮನೆಯ ಖಾತಾ ನಂಬರ್ ನ್ನು ಬಳಸಿಕೊಂಡು ಈ ದಾವೆಯನ್ನು ಹೂಡಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ನನ್ನ ಬಾಮೈದ ಆಗಿರುವುದರಿಂದ ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಪ್ರತಿವಾದಿಯ ಕುಟುಂಬಕ್ಕೆ ಸೇರಬೇಕಾದ ಆಸ್ತಿಯಾಗಿದ್ದು , ಅವರಿಗೆ ಬಿಟ್ಟು ಕೊಡಬೇಕಾಗುತ್ತದೆ ಎಂದು ವಾದಿ ವಿನಾಕಾರಣ ತಂಟೆ ತಕರಾರು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸ.ಇದೆ.**

(ರಘು ಎಂ.)
2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಅರಕಲಗೂಡು